**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 59/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಗಂಗಮ್ಮ | ಪಿಡಬ್ಲ್ಯೂ- 03 |
| ಗಂಡನ ಹೆಸರು | - ಮಂಜಪ್ಪ | ಸಿಡಬ್ಲ್ಯೂ -05 |
| ವಯಸ್ಸು | - 60 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ನಂದಿ ಗ್ರಾಮ | |

ದಿನಾಂಕಃ 03-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಯಾರೆಂದು ನನಗೆ ಗೊತ್ತಿಲ್ಲ. ನಾನು ಆತನನ್ನು ಈ ಹಿಂದೆ ನೋಡಿಲ್ಲ. ಈ ಪ್ರಕರಣದ ಯಾವುದೇ ಸಾಕ್ಷಿದಾರರು ನನಗೆ ಗೊತ್ತಿಲ್ಲ.

2. ಆರೋಪಿಯಿಂದ ಪ್ರಾಸಾ.2 ರವರಿಗೆ ಏನು ತೊಂದರೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ.

3. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿಃ 11-01-2023 ರಂದು ಸಾಕ್ಷಿಯು ತೋರಿಸಿದ ಸ್ಥಳದಲ್ಲಿ ಪೊಲೀಸರು ಜರುಗಿಸಿದ್ದಾರೆ ಎನ್ನಲಾದ ಪಂಚನಾಮೆಯಾಗಿದ್ದು ಅದನ್ನು ನಿಪಿ.4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ, ಯಾವ ವಿಚಾರಕ್ಕೆ ಮಾಡಿದ್ದೇನೆ ಎಂದು

ನನಗೆ ಗೊತ್ತಿಲ್ಲ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.5 ಮತ್ತು ಪಿ.6 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಯಾರು, ಎಲ್ಲಿ, ಯಾವ ವಿಚಾರಕ್ಕೆ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 08-01-2023 ರಂದು ಎಮ್ಮೆ ಮೇಯಿಸುವ ಚಾಸಾ.4 ಚಂದ್ರಪ್ಪರವರ ಸರದಿ ಇದ್ದು ಅವರ ಪರವಾಗಿ ಫ್ರಾಸಾ.2 ರವರು ಎಮ್ಮೆ ಮೇಯಿಸಲು ಸಿದ್ದರ ಓಣಿ ಹತ್ತಿರ ಹೋದಾಗ ಅವರಿಗೆ ಬಾಯಾರಿಕೆ ಆಗಿದ್ದರಿಂದ ಎಮ್ಮೆಗಳನ್ನು ಬಿಟ್ಟು ಮಧ್ಯಾಹ್ನ 12 ಗಂಟೆ ಸುಮಾರಿಗೆ ಮಿಟಲಿ ಮರದಡಿಯಲ್ಲಿ ನೀರು ಕುಡಿಯುತ್ತಿದ್ದಾಗ 1 ನೇ ಆರೋಪಿಯಾದ ಅರುಣಕುಮಾರ ಅಲ್ಲಿಗೆ ಹೋಗಿ ಏಕಾಏಕಿ ದೊಣ್ಣೆಯಿಂದ ಫ್ರಾಸಾ.2 ರವರ ಎಡಗಾಲು, ಎಡಗೈ ಮತ್ತು ಸೊಂಟಕ್ಕೆ ಬಲವಾಗಿ ಹೊಡೆದು ಅವಾಚ್ಯ ಶಬ್ಧಗಳಿಂದ ಬೈದನು ಎಂದರೆ ಸರಿಯಲ್ಲ. ಆತನ ಜೊತೆಗೆ ಹೋಗಿದ್ದ ಹೇಮಂತ್ ಸಹ ಫ್ರಾಸಾ.2 ರವರ ಕೈಗೆ

ಕಲ್ಲಿನಿಂದ ಹೊಡೆದು ಅವಾಚ್ಯ ಶಬ್ಧಗಳಿಂದ ನಿಂದಿಸಿದನು ಎಂದರೆ ಸರಿಯಲ್ಲ. ಆಗ ಪ್ರಾಸಾ.2 ರವರು ಯಾಕಪ್ಪ ಈ ರೀತಿ ಹೊಡೆಯುತ್ತೀರಾ ಎಂದು ಕೇಳಿದಾಗ, ಹೊಲೆಯ ಮಾದಿಗ ಸೂಳೆ ಮಗನೇ, ನಿನ್ನ ತಾಯಿನಾಡ ನಿನಗೆ ಜ್ಞಾನ ಇಲ್ಲವೇನೋ, ನಿನ್ನನ್ನು ಕೊಲೆ ಮಾಡುತ್ತೇನೆ ಮತ್ತು ನಿನ್ನ ಕುಟುಂಬದವರನ್ನು ಯಾರನ್ನು ಕೂಡ ಉಳಿಸುವುದಿಲ್ಲ ಎಂದು ಆರೋಪಿತರು ಹೇಳಿದ್ದಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿರುವ ಜೋಳದ ಗುಡ್ಡೆಗೆ ಎಮ್ಮೆಗಳನ್ನು ಬಿಟ್ಟಿದ್ದೀಯಾ ಎಂದು ಆರೋಪಿ ಪ್ರಾಸಾ.2 ರವರಿಗೆ ಬೈದಿದ್ದಾನೆ ಎಂದರೆ ಸರಿಯಲ್ಲ. ಆಗ ಪ್ರಾಸಾ.2 ರವರು ಇಲ್ಲಪ್ಪ ನಿನ್ನ ಜೋಳದ ಗುಡ್ಡೆಗೆ ಎಮ್ಮೆಗಳನ್ನು ಬಿಟ್ಟಿಲ್ಲ ಎಂದು ಹೇಳಿದಾಗಲೂ ಸಹ ಆರೋಪಿ ಪ್ರಾಸಾ.2 ರವರಿಗೆ ಪುನಃ ಹಲ್ಲೆ ಮಾಡಿ ದೊಣ್ಣೆಯನ್ನು ಮರದಡಿ ಬಿಸಾಡಿ ಹೋಗಿದ್ದರು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ.4 ರವರು ಅಲ್ಲಿಂದ ಹೊರಟೆವು ಎಂದರೆ ಸರಿಯಲ್ಲ. ನಂತರ ವಿಚಾರಿಸಲಾಗಿ ಪ್ರಾಸಾ.1 ರವರು ಜಮೀನಿನಲ್ಲಿ ಕೆಲಸವನ್ನು ಮುಗಿಸಿಕೊಂಡು ಸಂಜೆ 6 ಗಂಟೆಗೆ ನಮ್ಮ ಬೀದಿಯ ಹತ್ತಿರ ಬರುವಾಗ ನಮ್ಮ ಗ್ರಾಮದ ವಾಸಿಯಾದ ಚಾಸಾ.7 ರೇಖಾರವರು ಆತನಿಗೆ ಪ್ರಾಸಾ.2 ರವರು ಹನುಮಂತಪ್ಪರವರ ಜಮೀನಿನಲ್ಲಿರುವ ಮರದಡಿಯಲ್ಲಿ ಬಿದ್ದಿರುವವನ್ನು ತಿಳಿಸಿದ್ದ ಮೇರೆಗೆ ಪ್ರಾಸಾ.1 ರವರು ಚಾಸಾ.8 ರವರೊಂದಿಗೆ ಬೈಕಿನಲ್ಲಿ ಅಲ್ಲಿಗೆ ಹೋಗಿ ಪ್ರಾಸಾ.2 ರವರನ್ನು ಮನೆಗೆ ಕರೆದುಕೊಂಡು ಬಂದು ಮಲಗಿಸಿದ್ದಾಗಿ ಮಾರನೆ ದಿನ ಪ್ರಾಸಾ.2 ರವರಿಗೆ ನೋವು ಹೆಚ್ಚಾಗಿದ್ದರಿಂದ ಅವರನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಗೆ

ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ.

5. ದಿಃ 11-01-2023 ರಂದು ನಾನು ಆರೋಪಿ ಮೇಲೆ ಹೇಳಿದಂತೆ ಕೃತ್ಯ ಎಸಗಿದ್ದ ಸ್ಥಳವನ್ನು ಚಾಸಾ.2 ಮತ್ತು 3 ರವರ ಸಮಕ್ಷಮ ಪೊಲೀಸರಿಗೆ ತೋರಿಸಿದ್ದೇನೆ ಮತ್ತು ಸ್ಥಳದಲ್ಲಿದ್ದ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಒಂದು ಮರದ ದೊಣ್ಣೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ನಿಪಿ.4 ರಂತೆ ಮಧ್ಯಾಹ್ನ 2.20 ರಿಂದ 3.20 ರವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ದೊಣ್ಣೆಯನ್ನು ಅಮಾನತು ಪಪಿಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಪೊಲೀಸರು ನಿಪಿ.5 ಮತ್ತು ಪಿ.6 ರಂತೆ ಫೋಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ.

6. ಅದೇ ದಿನ ನಾನು ಪೊಲೀಸರಿಗೆ ಮೇಲೆ ಹೇಳಿದ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ. ಎಂದು ಗುರುತಿಸಲಾಯಿತು.

7. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.7 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿಯ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ